# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:10/2025

ಡಬ್ಲ್ಯೂ.ಡಬ್ಲ್ಯೂ-2

**<u>ದಿನಾಂಕ 27.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ.ಜೆ.ಪಿ. ವಕೀಲರಿಂದಃ**

ನಾನು ಐ.ಟಿ.ಐ. ನಲ್ಲಿ Fitter ಆಗಿ ವಿಧ್ಯಾಭ್ಯಾಸ ಮಾಡಿರುತ್ತೇನೆ. Electrical wire-men ಆಗಿ ನನಗೆ ಪರವಾನಗಿ ಇರುತ್ತದೆ. ನಾನು ಈಗ ಎಲ್ಲೂ ಕೆಲಸ ಮಾಡುತ್ತಿಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ಕೊಡುತ್ತೇವೆ ಎಂದು call-for ಮಾಡಿದ್ದರು. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯ supervisor ರವರು ಕೆಲಸ ಖಾಲಿ ಇದೆ ಎಂದು ನಮಗೆ ಕರೆದಿದ್ದರು. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸಕ್ಕೆ ಕರೆದಿರಲಿಲ್ಲ. ನನ್ನ ಕೆಲಸಕ್ಕೆ ನೇಮಕಾತಿ ಪತ್ರವನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ಕೊಟ್ಟಿರಲಿಲ್ಲ. ಸಂಬಳ, ಇ.ಎಸ್.ಐ. ಹಾಗೂ ಪಿ.ಎಫ್. ಸೌಲಭ್ಯವನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಿಂದ ಕೊಡುತ್ತಿದ್ದರು ಎಂದರೆ ಸರಿ. ನನ್ನ ಕೆಲಸವನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರ ಮೇಲ್ ವಿಚಾರಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯ location ನಲ್ಲಿ ಕೆಲಸ ಮಾಡುತ್ತಿದ್ದರಿಂದ ಗುತ್ತಿಗೆದಾರರ ಕೆಲಸವನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರು ಮಾಡುತ್ತಿದ್ದರು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-2 ರವರ ನಮಗೆ ಸಂಬಳ, ಇ.ಎಸ್.ಐ. ಹಾಗೂ ಪಿ.ಎಫ್. ಕೊಡುತ್ತಿದ್ದ ಕಾರಣ ಅವರೇ ನಮ್ಮ ಮಾಲೀಕರು ಆಗಿದ್ದರು ಎಂದರೆ ಸರಿ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಕೆಲಸ ಎಲ್ಲಿ ಗುತ್ತಿಗೆ ಸಿಗುತ್ತದೆಯೋ ಅಲ್ಲಿ ಕೆಲಸ ಮಾಡುವುದಾಗಿತ್ತು ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ, 2 ನೇ ಪಕ್ಷಗಾರರ ಸಂಖ್ಯೆ-2 ರವರ ಗುತ್ತಿಗೆ ಮುಗಿಯುವುದಕ್ಕೆ ಮುಂಚೆ ನನ್ನನ್ನು ಕೆಲಸದಿಂದ ತೆಗೆದಿದ್ದರು.

ನನ್ನನ್ನು Hitachi ಸಂಸ್ಥೆಗೆ ವರ್ಗಾವಣೆ ಮಾಡಿದ್ದರು ಎಂದರೆ ಹೌದು. ನಾನು ದಿನಾಂಕಃ 18.02.2023 ರಲ್ಲಿ Hitachi ಸಂಸ್ಥೆಗೆ ಹೋಗಿ ಕೆಲಸಕ್ಕೆ ವರದಿ ಮಾಡಿಕೊಂಡಿದ್ದೆ. 2 ನೇ ಪಕ್ಷಗಾರರ ಸಂಖ್ಯೆ-1 ರವರ ನನಗೆ ಯಾವುದೇ ನೇಮಕಾತಿ ಪತ್ರವನ್ನು ನೀಡಿಲ್ಲ. ಆದ್ದರಿಂದ ನನ್ನನ್ನು 2 ನೇ ಪಕ್ಷಗಾರರ ಸಂಖ್ಯೆ-1 ರವರು ಕೆಲಸದಿಂದ ತೆಗೆದಿಲ್ಲ, 2 ನೇ ಪಕ್ಷಗಾರರ ಸಂಖ್ಯೆ-2 ರವರು ವರ್ಗಾವಣೆ ಮಾಡಿದ್ದರು ಎಂದರೆ ಸರಿ. Electrical ಕೆಲಸದಲ್ಲಿ ಅನುಭವ ಹೆಚ್ಚಾದಂತೆ ಬೇಡಿಕೆ ಹೆಚ್ಚಾಗುತ್ತದೆ ಎಂದರೆ ಸರಿ. ನಾನು ಬೇರೆ ಕಡೆ ಕೆಲಸ ಮಾಡಲು ಪ್ರಯತ್ನ ಪಟ್ಟೆ ಆದರೆ ಕೆಲಸ ಸಿಗುತ್ತಿಲ್ಲ. ನಾನು ಪಾರ್ವತಿ ಹಾಗೂ ಕಾಂತಿ agencies ನಲ್ಲಿ ಕೆಲಸಕ್ಕೆಪ್ರಯತ್ನ ಮಾಡಿದ್ದೆ, ಆದರೆ ಕೆಲಸ ಸಿಕ್ಕಿಲ್ಲ.

ನನ್ನ ಕುಟುಂಬದಲ್ಲಿ ನನ್ನ ಹೆಂಡತಿ ಹಾಗೂ ಮಕ್ಕಳು ಇರುತ್ತಾರೆ. ನನ್ನ ಸಂಸಾರ ನಡೆಸಲು ನನಗೆ ತೊಂದರೆ ಆಗುತ್ತಿಲ್ಲ ಎಂದರೆ ಸರಿಯಲ್ಲ. ದಿನಗೂಲಿ ಮಾಡಿ ಸಂಸಾರ ನಡೆಸುತ್ತಿದ್ದೇನೆ ಎನ್ನುತ್ತಾರೆ. ಈ ನ್ಯಾಯಾಲಯದಲ್ಲಿ ಪ್ರಕರಣ ಮಾಡಿರುವ ಕಾರಣ ಹೆಚ್ಚಿನ ಹಣ ಪಡೆಯಬಹುದು ಎಂಬ ದೃಷ್ಟಿಯಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 2 ನೇ ಪಕ್ಷಗಾರರ ಸಂಖ್ಯೆ-1 ರವರ ಮೇಲೆ ಸುಳ್ಳು ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**